ಯುದ್ಧ, ಲೂಟಿ, ಅಟ್ಟಹಾಸ ಹಾಗೂ ನಿರಾಶ್ರಿತರ ನರಳಿಕೆಯ ಕಥನಗಳಿಂದ ತುಂಬಿಹೋಗಿದೆ.

ಬೆಟ್ಟ ಮತ್ತು ಕಡಲುಗಳ ನಡುವೆ ನೆಲೆಸಿರುವ ಇಸ್ತಾನಬುಲ್ ಜಗತ್ತಿನ ಚೆಲುವಾದ ನಗರಗಳಲ್ಲಿ ಒಂದು. ಇದು ಕ್ರಿಸ್ತಪೂರ್ವದಲ್ಲೇ ಸಾಂಸ್ಕೃತಿಕ ಧಾರ್ಮಿಕ ರಾಜಕೀಯ ಆಂದೋಲನಗಳ ತವರುಮನೆಯಾಗಿ ರೂಪುಗೊಂಡಿತು. ಕಾನ್ಸಾಂಟಿನ್ ಚಕ್ರವರ್ತಿ ಸ್ಥಾಪಿಸಿದ್ದರಿಂದ ಕಾನ್ಸಾಂಟಿನೊಪಾಲ್ ಎಂದೂ ಬೈಜಾಂಟಿಯನ್ ಚಕ್ರಾಧಿಪತ್ಯವಿದ್ದ ಕಾರಣ ಬೈಜಾಂಟಿಯಂ ಎಂದೂ ಇದಕ್ಕೆ ಹೆಸರಿದ್ದವು. ಬೆಟ್ಟ, ಕಾಡು–ಜಲಗಳ ತ್ರಿಕೂಟ, ಆಹ್ಲಾದಕರ ಹವೆ, ಕಡಲ ವ್ಯಾಪಾರಕ್ಕೆ ಬೇಕಾದ ಜಲಸಂಧಿ ಹಾಗೂ ವಿಶಾಲ ಮಾರುಕಟ್ಟೆಯ ಕಾರಣದಿಂದ ಎಲ್ಲರಿಗೂ ಇದರ ಮೇಲೆ ವ್ಯಾಮೋಹ. ನೆಪೋಲಿಯನ್ ಅಂತೂ ಇದು ಜಗತ್ತಿನ ರಾಜಧಾನಿಯಾಬೇಕೆಂದು ಬಯಸಿದ್ದನು.

ಗ್ರೀಕರು ಇಸ್ತಾನಬುಲ್ ಸ್ಥಾಪಿಸಿದ ಬಗ್ಗೆ ಪ್ರಚಲಿತವಾಗಿರುವ ಕತೆಯೊಂದು ಸ್ವಾರಸ್ಯಕರವಾಗಿದೆ. ಒಮ್ಮೆ ಹೊಸಜೀವನ ಹುಡುಕಿಕೊಂಡು ವಲಸೆಹೋಗಲು ನಿರ್ಧರಿಸಿದ ಕೆಲವು ಗ್ರೀಕ್ ಸಾಹಸಿಗಳು ತಮ್ಮ ದೇವತೆಗೆ ಶಕುನ ಕೇಳಲಾಗಿ, ‘ಎಲ್ಲಿ ಕುರುಡರಿದ್ದಾರೊ ಅಲ್ಲಿ ಹೋಗಿ ನೆಲೆಸಿ’ ಎಂದು ದೈವವಾಣಿಯಾಯಿತಂತೆ. ಅದರ ಪ್ರಕಾರ ಅವರು ಅಲೆಯುತ್ತ ಬರಲು, ಏಳುಬೆಟ್ಟಗಳ ನಡುವೆ ಕಡಲ ಖಾರಿಯಿರುವ ಒಂದು ಪ್ರದೇಶ ಕಂಡಿತಂತೆ. ‘ಇಂತಹ ಸುಂದರ ತಾಣವನ್ನು ಖಾಲಿ ಬಿಡಬೇಕಾದರೆ ಇಲ್ಲಿನ ಜನ ಕಣ್ಣಿದ್ದೂ ಕುರುಡರೇ ಸೈ. ದೈವ ಸೂಚಿಸಿದ ಜಾಗವಿದೇ ಇರಬೇಕು’ ಎಂದವರು ನೆಲೆಸಿದರಂತೆ. ಹೊಸನಾಡುಗಳ ಹುಡುಕಾಟ, ಆಕ್ರಮಣ, ಸಾಮ್ರಾಜ್ಯ ವಿಸ್ತರಣೆ ಮತ್ತು ನೆಲೆಸುವಿಕೆಗೆ ಅಧಿಕಾರಸ್ಥರು ಕಟ್ಟುವ ಸಿದ್ಧಾಂತಗಳು, ಪುರಾಣಕತೆಗಳಾಗಿ ರೂಪಾಂತರಗೊಳ್ಳುವುದು ಸಾಮಾನ್ಯ.

ಯೂರೋಪು–ಏಶಿಯಾ ಖಂಡಗಳನ್ನು ಬೇರ್ಪಡಿಸುವ ಮರ್ಮರ ಸಮುದ್ರದ ಎರಡೂ ಕಿನಾರೆಗಳಲ್ಲಿ ಇಸ್ತಾನಬುಲ್ ಪಸರಿಸಿದೆ. ನೆಲಬಂಧಿತ ದೇಶಗಳಿಗೆ ಹೋಲಿಸಿದರೆ ಕಡಲಂಚಿನ ದೇಶಗಳಲ್ಲಿ ಯಾವಾಗಲೂ ತೀವ್ರಗತಿಯ ಚಲನಶೀಲತೆ ಇರುತ್ತದೆ. ಇಸ್ತಾನಬುಲ್‌ನಲ್ಲಿ ಕಡಲ ದಂಡೆಗೇ ಹತ್ತಿಕೊಂಡು ಜಗತ್ತಿನ ಸಮಸ್ತ ಮೂಲೆಗಳಿಂದ ಬಂದು ಬೀಳುವ ಮಸಾಲೆ ಚಹಾ, ಮೆಣಸು, ಕಾಫಿ, ಕೇಸರಿ, ಗಿಡಮೂಲಿಕೆ, ಹಣ್ಣು ಹಂಪಲು, ದಿನಸಿಗಳಿಂದ ತುಳುಕುವ ಸುಪ್ರಸಿದ್ಧ ಮಾರುಕಟ್ಟೆಯಿದೆ. ಭಾರತ–ಟರ್ಕಿಗಳ ಪ್ರಾಚೀನ ಸಂಬಂಧಕ್ಕೆ ಸಾಂಬಾರ ಪದಾರ್ಥಗಳೂ ಕುದುರೆ ಸವಾರರೂ ಕಾರಣ. ಕರ್ನಾಟಕದಿಂದ ಕರಿಮೆಣಸು, ಬೆಲ್ಲ, ಸಕ್ಕರೆ, ಜವಳಿ, ಕಬ್ಬಿಣ ಇಲ್ಲಿಗೆ ರಫ್ತಾಗುತ್ತಿದ್ದವು. ಏಳು ಶತಮಾನದ ಹಿಂದೆ ನಿರ್ಮಾಣವಾದ ಈ ಮಾರುಕಟ್ಟೆ ತಾನೇ ಅರಮನೆಯಂತಿದೆ. ಎಷ್ಟೊಂದು ಬಗೆಯ ಒಣಹಣ್ಣು, ಪರಿಮಳದ ಚಹ, ವರ್ಣರಂಜಿತ ಪಿಂಗಾಣಿ, ರೂಮಿಟೋಪಿ, ಕಾಶ್ಮೀರದ ಪಶ್ಮೀನಾ ಶಾಲು – ಇಂಥದಿಲ್ಲ ಎನ್ನುವಂತಿಲ್ಲ.

ಇಸ್ತಾನ್‌ಬುಲ್, ಜಗತ್ತಿನ ಪ್ರವಾಸಿಗರಿಗೆ ಪ್ರಿಯವಾದ ತಾಣವಾಗಿದೆ. ಏರ್‌ಪೋರ್ಟಿನ ಇಮಿಗ್ರೇಶನ್ ಪಾಳಿಗಳಲ್ಲಿ ಇರುವೆಗಳಂತೆ ಯೂರೋಪಿಯನ್ನರು, ಜಪಾನಿಗರು, ಆಫ್ರಿಕನ್ನರು ಕಿಕ್ಕಿರಿದಿದ್ದರು. ಈ ಪ್ರವಾಸಿಗಳು ಟರ್ಕಿ ಅಡುಗೆಯನ್ನು ತುಂಬ ಇಷ್ಟಪಡುತ್ತಾರಂತೆ – ಅದರಲ್ಲೂ ಮೀನೂಟವನ್ನು. ಪ್ರಾಚೀನ ನಗರಗಳ ಜೀವವು ಪಾಶ್ ರೆಸ್ಟೊರೆಂಟುಗಳಿಗಿಂತಲೂ ಇಕ್ಕಟ್ಟಾದ ಗಲ್ಲಿ ಹೋಟೆಲುಗಳಲ್ಲಿರುತ್ತದೆ. ಸ್ಟಾರ್ ಹೋಟೆಲುಗಳಲ್ಲಿ ಬೆಚ್ಚಿಬೀಳಿಸುವ ಅಚ್ಚುಕಟ್ಟುತನವಿದ್ದರೂ, ಜೀವಂತಿಕೆ–ಸಲುಗೆ ಇರುವುದಿಲ್ಲ. ಕೊಲ್ಲಿಗೆ ಅಡ್ಡಗಟ್ಟಿದ ಸೇತುವೆಯ ಕೆಳಗೆ, ಜಲಕ್ಕೆ ತಾಗಿದಂತೆ ಚಿಕ್ಕ ಹೋಟೆಲುಗಳಿದ್ದವು. ಅಲ್ಲಿ ಗ್ರಾಹಕರು ತೋರಿಸಿದ ಜೀವಂತ ಮೀನನ್ನು ಹತ್ತು ನಿಮಿಷದಲ್ಲಿ ಸಿದ್ಧಪಡಿಸಿಕೊಡುವ ವ್ಯವಸ್ಥೆಯಿತ್ತು. ಕೆಳಗೆ ಅಚ್ಚನೀಲಿ ಬಣ್ಣ ಹರಿಬಿಟ್ಟಂತೆ ನೀರು. ಮೇಲೆ ನೀಲಾಗಸದಲ್ಲಿ ಹಾರುವ ನೀಳರೆಕ್ಕೆಯ ಶ್ವೇತ ಸೀಗಲ್ಲು. ಸೇತುವೆ ಮೇಲಿಂದ ನೂರಾರು ಶಿಕಾರಿದಾರರು ಗಾಳ ಇಳಿಬಿಟ್ಟು ಮೀನು ಹಿಡಿವ ದೃಶ್ಯ ನೋಡುತ್ತ ಮೀನೂಟಕ್ಕೆ ಆರ್ಡರ್ ಕೊಟ್ಟು ಕೂತೆವು. ದೊಡ್ಡ ತಟ್ಟೆಯನ್ನು ಆವರಿಸಿಕೊಂಡ ಮೀನು ಆಗಮಿಸಿತು. ಉಪ್ಪುಖಾರ ಉಂಡ ಜೀವಗಳಿಗೆ ಟರ್ಕಿಗಳ ಸಪ್ಪನ್ನಡಿಗೆ ಹಿಡಿಸುವುದಿಲ್ಲ. ನನಗಂತೂ ಮಂಗಳೂರಿನ ನಾರಾಯಣ ಹೋಟೆಲಿನ ನಾಲಗೆಯ ರುಚಿಮೊಗ್ಗುಗಳನ್ನು ತಣಿಸುವ ಫಿಶ್‌ಫ್ರೈ ನೆನಪಾಯಿತು.

ದೇಶವೊಂದು ಪ್ರವಾಸಿ ತಾಣವಾಗಲು ಸರ್ಕಾರಗಳು ಪ್ರವಾಸವನ್ನು ಉದ್ಯಮವಾಗಿ ಬೆಳೆಸಿದರೆ ಸಾಲದು. ಅದಕ್ಕಾಗಿ ಅಲ್ಲಿನ ಸಮಾಜಗಳೂ ಉದಾರವಾದಿಯಾಗಬೇಕು. ಕೆಲವು ಅರಬ್ ದೇಶಗಳಲ್ಲಿ ಅಪರೂಪದ ಪ್ರಾಚೀನ ಸ್ಮಾರಕಗಳಿವೆ. ರಾಜಪ್ರಭುತ್ವ ಮತ್ತು ಸಂಪ್ರದಾಯಸ್ಥ ಸಾಮಾಜಿಕ ನಿಯಮಗಳಿಂದ ಪ್ರವಾಸೋದ್ಯಮ



